[redacted]



# ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶಿಂಧೆ ಅವರ ತಾತ್ಕಾಲಿಕ ಪ್ರವಾಸ ವೇಳಾಪಟ್ಟಿ

ಬೆಳಗಾವಿ,ಮಾ.11–: ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ಶಿಂಧೆ ಅವರು ಮಾ.11 ರಿಂದ ಮಾ.17ರ ವರೆಗೆ ಜಿಲ್ಲೆಯಲ್ಲಿ ತಾತ್ಕಾಲಿಕ ಪ್ರವಾಸವನ್ನು ಕೈಗೊಳ್ಳಲಿದ್ದಾರೆ.

ಮಾ. 12 ರಂದು ಬೆಳಗ್ಗೆ 9.30 ರಿಂದ 10 ಗಂಟೆಯವರೆಗೆ ಗ್ರಾಮೀಣ ನೀರು ಸರಬರಾಜು ವಿಭಾಗ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಬೆಳಿಗ್ಗೆ 10 ರಿಂದ 11 ಗಂಟೆಗೆ ಪಂಚಾಯತ್ ರಾಜ್ ಇಂಜನಿಯರಿಂಗ್ ಗ್ರಾಮೀಣ ನೀರು ಸರಬರಾಜು ವಿಭಾಗ ಸಭೆ; 11 ಗಂಟೆಯಿಂದ 1 ಗಂಟೆಯವರೆಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಸತಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಮನೆಗಳ ಪ್ರಗತಿ ಪರಿಶೀಲನ ಕುರಿತು ಕೇಸ್ವಾನ್ ಮೂಲಕ ವಿಡಿಯೋ ಸಂವಾದ ಸಭೆ; ಮಧ್ಯಾಹ್ನ 3 ರಿಂದ ಸಾಯಂಕಾಲ 6 ಗಂಟೆಯವರೆಗೆ ಜಿಲ್ಲೆಯ ಎಲ್ಲ ಪಿಡಿಒ ಗಳೊಂದಿಗೆ ಕೇಸ್ವಾನ್ ವಿಡಿಯೋ ಸಂವಾದ ಮೂಲಕ ಕುಡಿಯುವ ನೀರಿನ ಸಮಸ್ಯೆ ನರೇಗಾ, ಎಸ್‌ಬಿಎಂ, ಮನೆಯ ಹಾಗೂ ಪಂಚಾಯತ್ ರಾಜ್ ವಿಷಯಗಳ ಕುರಿತು ಪ್ರಗತಿ ಪರಿಶಿಲನಾ ಸಭೆ ನಡೆಸಲಿದ್ದಾರೆ.

ಮಾ. 13 ರಂದು ಬೆಳಗ್ಗೆ 10 ರಿಂದ 11 ಗಂಟೆಗೆ ನಲ್ಮ್ ಸಭೆ; ಬೆಳಗ್ಗೆ 11 ರಿಂದ ಮಧ್ಯಾಹ್ನ 12 ಗಂಟೆಗೆ ಜಿಲ್ಲಾಧಿಕಾರಿಗಳ ಅಚೇರಿ ಸಭಾ ಭವನದಲ್ಲಿ ಕರ್ನಾಟಕ ಗಡಿ ಮತ್ತು ನದಿಗಳ ರಕ್ಷಣಾ ಆಯೋಗದ ಅಧ್ಯಕ್ಷ ಅವರ ಅಧ್ಯಕ್ಷತೆಯಲ್ಲಿ ಜರಗುವ ಸಭೆ; 12 ರಿಂದ ಸಾಯಂಕಾಲ 6 ಗಂಟೆಯವರೆಗೆ ನಿಪ್ಪಾಣಿ ತಾಲೂಕಿನ ವಿವಿಧ ಗ್ರಾಮಗಳ ಭೇಟಿ; ಅದೇ ವೇಳೆಯಲ್ಲಿ ಎಂವಿಎಸ್ ವರ್ಕ್ ಸ್ಕೂಲ್, ಅಂಗನವಾಡಿ ಹಾಗೂ ಗ್ರಂಥಾಲಯಗಳ ಪರಿಶೀಲನೆ.

ಮಾ.14 ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಮುಂಬರುವ ಚುನಾವಣಾ ತಯಾರಿ ಕುರಿತು ಭಾರತ ಚುನಾವಣಾ ಆಯೋಗದಿಂದ ಆಯೋಜಿಸಲಾದ ವಿಡಿಯೋ ಸಂವಾದ; ಮಧ್ಯಾಹ್ನ 3 ರಿಂದ ಸಾಯಂಕಾಲ 6 ವರೆಗೆ ಗ್ರಾಮ ಪಂಚಾಯತ್ ಸಿಬ್ಬಂದಿಗಳ ಮೇಲ್ಮನವಿ ಕುರಿತು ಚರ್ಚೆ ನಡೆಸಲಿದ್ದಾರೆ. ಮಾ. 15 ರಂದು ಬೆಳಗ್ಗೆ 10 ರಿಂದ ಸಾಯಂಕಾಲ 6 ವರೆಗೆ ದೈನಂದಿನ ಕಚೇರಿ ಕೆಲಸ ಹಾಗೂ ಚುನಾವಣೆ ಕೆಲಸ. ಮಾ. 16 ರಂದು ಬೆಳಗ್ಗೆ 10 ರಿಂದ 11 ಗಂಟೆವರೆಗೆ ಜಿಲ್ಲಾ ಪಂಚಾಯತ್ ಕಚೇರಿಯಲ್ಲಿ ಆಅಅ ಆಐಖಅ ಸಭೆ; ಬೆಳಗ್ಗೆ 11 ರಿಂದ ಸಂಜೆ 6 ವರೆಗೆ ದೈನಂದಿನ ಕಚೇರಿ ಕೆಲಸ ಹಾಗೂ ಚುನಾವಣೆ ಕೆಲಸ; ಮಾ.17 ರಂದು ಸಾರ್ವತ್ರಿಕ ರಜೆ ಇರುತ್ತದೆ ಪ್ರಕಟಣೆ ತಿಳಿಸಿದೆ.

# ಆನೆಗೊಂದಿ ಉತ್ಸವ: ಗಗನ್ ಮಹಲ್ ವಿದ್ಯುತ್ ದೀಪಾಲಂಕಾರಕ್ಕೆ ಜಿಲ್ಲಾಧಿಕಾರಿಗಳಿಂದ ಚಾಲನೆ

ಕೊಪ್ಪಳ ಮಾರ್ಚ್ 11: ವಿಜಯನಗರ ಸಾಮ್ರಾಜ್ಯದ ತೊಟ್ಟಿಲು ಆನೆಗೊಂದಿ ಉತ್ಸವ–2024ರ ಅಂಗವಾಗಿ ಆನೆಗೊಂದಿಯ ಐತಿಹಾಸಿಕ ಗಗನ್ ಮಹಲ್ ವಿದ್ಯುತ್ ದೀಪಾಲಂಕಾರದಿಂದ ಕಂಗೊಳಿಸುತ್ತಿದ್ದು, ದೀಪಾಲಂಕಾರಕ್ಕೆ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ರಿಬ್ಬನ್ ಕತ್ತರಿಸುವುದರ ಮೂಲಕ ಸೋಮವಾರ ಚಾಲನೆ ನೀಡಿದರು.ಗಗನ್ ಮಹಲ್ ತನ್ನ ಸೊಗಸಾದ ವೈಶಿಷ್ಟ್ಯಗಳು ಮತ್ತು ಪ್ರಾಚೀನ ಭಾರತದ ಗೋಡೆಗಳಾದ್ಯಂತ ವಿಸ್ತರಿಸುವ ಅಸಾಧಾರಣ ಕಲಾಕೃತಿಗಳಿಗೆ ಹೆಸರುವಾಸಿಯಾಗಿದೆ. ಇದನ್ನು 15ನೇ ಶತಮಾನದಲ್ಲಿ ರಚಿಸಲಾದ ಕೌಶಲ್ಯಗಳು ಮತ್ತು ಬುದ್ಧಿವಂತ ಇಂಜನಯರಗಳಿಂದ ನಿರ್ಮಿಸಲಾಗಿದೆ. ಇದು ಈ ಮಹಲನ್ನು ಹಲವಾರು ಶತಮಾನಗಳವರೆಗೆ ಸ್ಥಿರ ಮತ್ತು ದೃಢವಾಗಿ ಮಾಡಿತು. ನವೆಂಬರ್‌ನಿಂದ ಫೆಬ್ರವರಿ ವರೆಗಿನ ಚಳಿಗಾಲದ ಅವಧಿಯಲ್ಲಿ ಗಗನ್ ಮಹಲ್ ವೀಕ್ಷಣೆಗೆ ಅನೇಕ ಪ್ರವಾಸಿಗರನ್ನು ಆಕರ್ಷಿಸುತ್ತದೆ, ಈ ಮಹಲ್ ಮತ್ತು ಅದರ ಭವ್ಯವಾದ ಉಳ್ಳತೆಯನ್ನು ಅನ್ವೇಷಿಸಲು ಇದು ಅತ್ಯುತ್ತಮ ಸಮಯವೆಂದು ಪರಿಗಣಿಸಲಾಗಿದೆ. ಗಗನ್ ಮಹಲ್ ಇಂದಿಗೆ 500 ವರ್ಷಗಳ ಹಿಂದೆ ಇದ್ದ ಇಂಜಿನಿಯರಗಳಿಂದ ಅಸಾಧಾರಣ ಕೌಶಲ್ಯವನ್ನು ಪ್ರದರ್ಶಿಸುತ್ತದೆ. ಈ ಅರಮನೆಯು ಬೇಸಿಗೆಯಲ್ಲಿಯು ತಂಪಾಗಿರುವ ರೀತಿಯಲ್ಲಿ ನಿರ್ಮಿಸಲ್ಪಟ್ಟಿದೆ. ಆನೆಗೊಂದಿ ಉತ್ಸವ ಹಿನ್ನೆಲೆಯಲ್ಲಿ ಗಗನ್ ಮಹಲ್ ಹೆಚ್ಚು ಆಕರ್ಷಣೀಯವಾಗಿ ಕಾಣಬೇಕೆಂಬ ಉದ್ದೇಶದಿಂದ ಗಗನ್ ಮಹಲ್‌ಗೆ ವಿದ್ಯುತ್ ದೀಪಾಲಂಕಾರದಿಂದ ಸಿಂಗರಿಸಲಾಗಿದೆ. ಈ ಸಂದರ್ಭದಲ್ಲಿ ಗಂಗಾವತಿ ಶಾಸಕರಾದ ಜಿ.ಜನಾರ್ಧನ ರೆಡ್ಡಿ, ರಾಜವಂಶಸ್ಥರಾದ ಲಲಿತರಾಣಿ ರಂಗದೇವರಾಯಲು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೆಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಯಶೋಧಾ ವಂಟಗೋಡಿ, ಕೊಪ್ಪಳ ಉಪವಿಭಾಗಾಧಿಕಾರಿಗಳಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಗಂಗಾವತಿ ತಹಶೀಲ್ದಾರರಾದ ಯು.ನಾಗರಾಜ, ತಾಲ್ಲೂಕು ಪಂಚಾಯತ್ ಇಒ ಲಕ್ಷ್ಮೀ ದೇವಿ, ಆನೆಗೊಂದಿ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಮಹದೇವಿ, ಉಪಾಧ್ಯಕ್ಷರಾದ ಪೂರ್ಣಿಮಾ, ಗಣ್ಯರಾದ ಅರುಣಾ ಲಕ್ಷ್ಮೀ ಸೇರಿದಂತೆ ಜನಪ್ರತಿನಿಧಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ಲಕ್ಷ್ಮೇಶ್ವರ ಹಾಗೂ ಶಿರಹಟ್ಟಿ ತಾಲೂಕು ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶ ಕಾರ್ಯಕ್ರಮ

ಗದಗ ಮಾರ್ಚ 11: ಲಕ್ಷ್ಮೇಶ್ವರ ಹಾಗೂ ಶಿರಹಟ್ಟಿ ತಾಲೂಕು ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶ ಕಾರ್ಯಕ್ರಮವನ್ನು ಮಾರ್ಚ 12 ರಂದು ಮಧ್ಯಾಹ್ನ 3 ಗಂಟೆಗೆ ಲಕ್ಷ್ಮೇಶ್ವರ ಉಮಾ ಮಹಾವಿದ್ಯಾಲಯ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದಾರೆ. ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ಶಿರಹಟ್ಟಿ ಶಾಸಕ ಡಾ.ಚಂದ್ರು ಕೆ ಲಮಾಣಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.ಮುಖ್ಯ ಅತಿಥಿಗಳಾಗಿ ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಸಚಿವರಾದ ಕೆ.ಎಚ್.ಮುನಿಯಪ್ಪ,ಸಾರಿಗೆ ಮತ್ತು ಮುಜರಾಯಿ ಸಚಿವರಾದ ರಾಮಲಿಂಗಾರೆಡ್ಡಿ ,ಇಂಧನ ಸಚಿವರಾದ ಕೆ.ಜೆ. ಜಾರ್ಜ,ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವ ಡಾ. ಶರಣಪ್ರಕಾಶ ರುದ್ರಪ್ಪ ಪಾಟೀಲ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನ ಹಾಗೂ ಹಿರಿಯ ನಾಗರೀಕರಣ ಸಬಲೀಕರಣ ಸಚಿವರಾದ ಶ್ರೀಮತಿ ಲಕ್ಷ್ಮೀ ಹೆಬ್ಬಾಳಕರ್, ಸರ್ಕಾರಿ ಮುಖ್ಯ ಸಚೇತಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಸಲೀಂ ಅಹ್ಮದ್, ರಾಜ್ಯ ಖನಿಜ ನಗಮದ ಅಧ್ಯಕ್ಷರು ಹಾಗೂ ರೋಣ ಶಾಸಕ ರಾದ ಜಿ.ಎಸ್.ಪಾಟೀಲ, ಸಂಸದರುಗಳಾದ ಶಿವಕುಮಾರ ಉದಾಸಿ, ಪಿ.ಸಿ.ಗದ್ದಿಗೌಡರ,ವಿಧಾನಪರಿಷತ್ ಸದಸ್ಯರುಗಳಾದ ಎಸ್.ವಿ. ಸಂಕನೂರ,ಪ್ರದೀಪ ಶೆಟ್ಟರ,ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್,ಜಿಲ್ಲಾ ಪೊಲೀಸ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ, ಲಕ್ಷ್ಮೇಶ್ವರ ತಾ.ಪಂ. ಯೋಜನಾ ನಿರ್ದೇಶಕರು ಹಾಗೂ ಆಡಳಿತಾಧಿಕಾರಿ ಜಗದೇವ ಬಿ, ಶಿರಹಟ್ಟಿ ತಾ.ಪಂ. ಆಡಳಿತಾಧಿಕಾರಿ ಹಾಗೂ ಜಿ.ಪಂ. ಮುಖ್ಯಯೋಜನಾಧಿಕಾರಿ ಎನ್.ಕೆ.ನಿ ಮರ್ಲಾ, ಲಕ್ಷ್ಮೇಶ್ವರ ಪುರಸಭೆ ಆಡಳಿತಾಧಿಕಾರಿ ಹಾಗೂ ಉಪವಿಭಾ ಗಾಧಿಕಾರಿ ಡಾ.ವೆಂಕಟೇಶ ನಾಯ್ಕ್ ಆಗಮಿಸುವರು.

ಲಕ್ಷ್ಮೇಶ್ವರ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ಧರ್ಮರ ಕೃಷ್ಣಪ್ಪ , ಲಕ್ಷ್ಮೇಶ್ವರ ತಹಶೀಲ್ದಾರರಾದ ವಾಸುದೇವ ಸ್ವಾಮಿ , ಶಿರಹಟ್ಟಿ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ನಂಗಪ್ಪ ಓಲೇಕಾರ,ಶಿರಹಟ್ಟಿ ತಹಶೀಲಾ ್ದರರು ಹಾಗೂ ಪ.ಪಂ. ಆಡಳಿತಾಧಿಕಾರಿ ಅನಿಲ ಬಡಿಗೇರ, ಶಿರಹಟ್ಟಿ ಆರಕ್ಷಕ ವೃತ್ತ ನಿರೀಕ್ಷಕ ನಾಗರಾಜ ಮಾಡಳ್ಳಿ , ಲಕ್ಷ್ಮೇಶ್ವರ ಪುರಸಭೆ ಮುಖ್ಯಾಧಿಕಾರಿ ಮಹೇಶ ಹಡಪದ, ಶಿರಹಟ್ಟಿ ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ ಸಿದ್ಧರಾಯ ಕಟ್ಟಿಮನಿ ಸರ್ವರಿಗೂ ಸ್ವಾಗತ ಕೋರಿದ್ದಾರೆ.

## ಇಮಾಮ ಮುನೀರ ಅಹ್ಮದ ಕೊರಬು ಅವರಿಗೆ ಪಿಎಚ್‌ಡಿ ಪದವಿ

ಬೆಳಗಾವಿ,ಮಾ.11–: ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ "ಡಯಾಸ್ಪೋರಾ, ಟ್ರಾನ್ಸ್‌ನ್ಯಾಷನ್ಯಾಲಿಟಿ ಆ್ಯಂಡ್ ಮಲ್ಟಿಕಲ್ಚರಲಿಜಮ್ ಇನ್ ಸೆಲೆಕ್ಟ್ ನಾವೆಲ್ಸ್ ಆಫ್ ಇಂಡಿಯನ್ ಡಯಾಸ್ಪೋರಿಕ್ ವುಮೆನ್ ನಾವೆಲಿಸ್ಟ್ಸ್" ಕುರಿತು ಇಮಾಮ ಮುನೀರ ಅಹ್ಮದ ಕೊರಬು ಅವರು ಸಲ್ಲಿಸಿದ್ದ ಮಹಾಪ್ರಬಂಧಕ್ಕೆ ಪಿಎಚ್‌ಡಿ ಪದವಿ ನೀಡಿದೆ. ಇಮಾಮ ಮುನೀರ ಅಹ್ಮದ ಕೊರಬು

ಅವರು ಇಂಗ್ಲಿಷ್ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ನಾಗರತ್ನಾ ವೀ ಪರಾಂಡೆ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡಿದ್ದರು. ಡಾಕ್ಟರೇಟ್ ಪದವಿ ಪಡೆದಿರುವ ಇಮಾಮ ಮುನೀರ ಅಹ್ಮದ ಕೊರಬು ಅವರನ್ನು ಕುಲಪತಿ ಪ್ರ. ಸಿ ಎಂ ತ್ಯಾಗರಾಜ್ ಅವರು ಕುಲಸಚಿವ ಪ್ರೊ. ರವೀಂದ್ರನಾಥ ಎನ್ ಕದಮ್ ಅವರು ಹಾಗೂ ಮೌಲ್ಯಮಾಪನ ಕುಲಸಚಿವರು ಅಭಿನಂದಿಸಿದ್ದಾರೆ.

## ಮಾ.13 ರಂದು ಲೋಕಾಯುಕ್ತದಿಂದ ಅಹವಾಲು ಸ್ವೀಕಾರ ಸಭೆ

ಕೊಪ್ಪಳ, ಮಾರ್ಚ್ 11: ಕೊಪ್ಪಳ ಲೋಕಾಯುಕ್ತದಿಂದ ಯಲಬುರ್ಗಾ ಮತ್ತು ಕುಕನೂರು ತಾಲ್ಲೂಕು ಒಳಗೊಂಡಂತೆ ಮಾರ್ಚ್ 13 ರಂದು ಬೆಳಗ್ಗೆ 11 ಗಂಟೆಗೆ ಯಲಬುರ್ಗಾ ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ಸಾರ್ವಜನಿಕ ಕುಂದು ಕೊರತೆಗಳ ಅಹವಾಲು ಸ್ವೀಕಾರ ಸಭೆಯನ್ನು ಆಯೋಜಿಸಲಾಗಿದೆ.ಅಂದು ಎಲ್ಲಾ ಇಲಾಖೆಯ ತಾಲ್ಲೂಕ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದು,ಸಂಬಂಧಿಸಿದ ತಾಲ್ಲೂಕುಗಳ ಸಾರ್ವಜನಕರು ಅಹವಾಲು ಸ್ವೀಕಾರ ಸಭೆಯಲ್ಲಿ ಭಾಗವಹಿಸಿ ಸರ್ಕಾರಿ ಇಲಾಖೆಗಳಲ್ಲಿ ಅಧಿಕಾರಿ, ಸಿಬ್ಬಂದಿಗಳಿಂದ ತೊಂದರೆ ಆಗುತ್ತಿದ್ದಲ್ಲಿ ಆ ಕುರಿತು ದೂರು ಸಲ್ಲಿಸಿ ಸ್ಥಳದಲ್ಲಿಯೇ ಇದ್ದ ಅಧಿಕಾರಿಗಳೊಂದಿಗೆ ಕೆಲಸ ನೆರವೇರಿಸಿ ಕೊಳ್ಳಲು ಅಥವಾ ಸ್ಥಳದಲ್ಲಿಯೇ ದೂರು ಅರ್ಜಿಯ ಫಾರಂ ನಂ : 1 ಮತ್ತು 2 ತೆಗೆದುಕೊಂಡು ದೂರು ನೀಡಲು ಅನುಕೂಲ ಕಲ್ಪಿಸಲಾಗಿದ್ದು, ಸಾರ್ವಜನಕರು ಉಪಯೋಗ ಪಡೆದುಕೊಳ್ಳಬೇಕು.ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 9364062699, 9364062700, 9364062701 ಮತ್ತು 9364062702 ಗೆ ಸಂಪರ್ಕಿಸಬಹುದು ಎಂದು ಕರ್ನಾಟಕ ಲೋಕಾಯುಕ್ತ ಕೊಪ್ಪಳ ಘಟಕದ ಪೊಲೀಸ್ ಉಪಾಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಆನೆಗೊಂದಿ ಉತ್ಸವ: ಫಲ–ಪುಷ್ಪ ಪ್ರದರ್ಶನಕ್ಕೆ ಜಿ.ಜನಾರ್ಧನ ರೆಡ್ಡಿ ಅವರಿಂದ ಚಾಲನೆ

ಕೊಪ್ಪಳ ಮಾರ್ಚ್ 11 : ಆನೆಗೊಂದಿ ಉತ್ಸವ–2024ರ ಪ್ರಯುಕ್ತ ಕೊಪ್ಪಳ ತೋಟಗಾರಿಕೆ ಇಲಾಖೆಯಿಂದ ಉತ್ಸವದ ಮುಖ್ಯ ವೇದಿಕೆ ಆವರಣದಲ್ಲಿ ಮಾರ್ಚ್ 11 ಮತ್ತು 12ರಂದು ಏರ್ಪಡಿಸಲಾದ ಫಲ–ಪುಷ್ಪ ಪ್ರದರ್ಶನಕ್ಕೆ ಗಂಗಾವತಿ ಶಾಸಕರಾದ ಜಿ.ಜನಾರ್ಧನ ರೆಡ್ಡಿ ಅವರು ರಿಬ್ಬನ್ ಕತ್ತರಿಸುವುದರ ಮೂಲಕ ಸೋಮವಾರ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ರಾಜವಂಶಸ್ಥರಾದ ಲಲಿತರಾಣಿ ರಂಗದೇವರಾಯಲು, ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೆಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಯಶೋಧಾ ವಂಟಗೋಡಿ, ಕೊಪ್ಪಳ ಉಪವಿಭಾಗಾಧಿಕಾರಿಗಳಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಜಂಟಿ ಕೃಷಿ ನಿರ್ದೇಶಕರಾದ ರುದ್ರೇಶಪ್ಪ ಟಿ.ಎಸ್., ತೋಟಗಾರಿಕೆ ಇಲಾಖೆ ಉಪನಿರ್ದೇಶಕರಾದ ಕೃಳ್ಣ ಉಕ್ಕುಂದ, ಗಂಗಾವತಿ ತಹಶೀಲ್ದಾರರಾದ ಯು.ನಾಗರಾಜ, ಗಣ್ಯರಾದ ಅರುಣಾ ಲಕ್ಷ್ಮೀ ಸೇರಿದಂತೆ ಜನಪ್ರತಿನಿಧಿಗಳು, ವಿವಿಧ ಇಲಾಖೆಗಳ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು. ಕೈಬೀಸಿ ಕರೆಯುತಿದೆ ಫಲ–ಪುಷ್ಪ ಪ್ರದರ್ಶನ: ಫಲಪುಷ್ಪ ಪ್ರದರ್ಶನದಲ್ಲಿ ವಿವಿಧ ಬಗೆಯ ಹೂವಿನ ಮತ್ತು ಹಣ್ಣಿನ ಮಾದರಿಗಳನ್ನು ಸಿದ್ಧಪಡಿಸಲಾಗಿದೆ.

ಹೂವಿನ ಜೋಡಣೆ ಮುಖಾಂತರ ವಿವಿಧ ರೀತಿಯ ಮಾದರಿಯ ಸ್ತಬ್ಧ ಚಿತ್ರಗಳ ಮೂಲಕ ಜನರನ್ನು ತನ್ನತ್ತ ಕೈಬೀಸಿ ಕರೆಯುತ್ತಿದೆ. ವಿಶೇಳವಾಗಿ ಹಣ್ಣುಗಳಲ್ಲಿ ನಾಡದೇವತೆಯಾದ ಭುವನೇಶ್ವರಿ ದೇವಿ, ಕುವೆಂಪು, ದ.ರಾ ಬೇಂದ್ರೆ, ಭಾರತ ರತ್ನ ಸಂವಿಧಾನ ಶಿಲ್ಪಿ ಡಾ ಬಾಬಾ ಸಾಹೇಬ್ ಅಂಬೇಡ್ಕರ್ ಚಿತ್ರಗಳು ಹಾಗೂ ಆನೆಗೊಂದಿ ಕೋಟೆಯ ಮುನ್ನೋಟ,

ಹಂಪಿ ದೇವಸ್ಥಾನದ ಗೋಪುರ ಸ್ತಬ್ಧ ಚಿತ್ರ ವಿವಿಧ ಮಾದರಿಯ ಅಲಂಕಾರಿಕ ಗಿಡಗಳ ಜೋಡಣೆ, ಕ್ಯಾಕ್ಟಸ್ ಮಾದರಿ, ವರ್ಟಿಕಲ್ ಮಾದರಿ, ತ್ರಿಕೋನಾಕಾರ ಅಲಂಕಾರಿಕ ಗಿಡಗಳ ಮಾದರಿ, ಹುಲ್ಲಿನ ಮಾದರಿಯ ನೀರಿನ ಜಲಪಾತ ಅನಾವರಣ, ವಿವಿಧ ಹಣ್ಣು ಮತ್ತು ತರಕಾರಿಗಳ ಕೆತ್ತನೆ, ಜಿಲ್ಲೆಯ ರೈತರು ಬೆಳೆದ ತೋಟಗಾರಿಕೆ ಬೆಳೆಗಳ ಪ್ರದರ್ಶಿಕೆಗಳು, ವಿವಿಧ ಅಲಂಕಾರಿಕ ಕುಂಡಗಳ ಜೋಡಣೆ, ಬಣ್ಣ ಬಣ್ಣದ ಹೂವುಗಳ ಮತ್ತು ತರಕಾರಿಗಳ ಜೋಡಣೆ ಹಾಗೂ ಇಲಾಖೆಯ ಯೋಜನೆಗಳ ಮಾಹಿತಿಗಳ ಬಗ್ಗೆ ವಿವರಣೆ ಹಾಗೂ ತೋಟಗಾರಿಕೆ ಕ್ಷೇತ್ರಗಳಲ್ಲಿ ಉತ್ಪಾದಿಸಿದ ಪರಿಕರಗಳ ಪ್ರದರ್ಶನವನ್ನು ಈ ಫಲಪುಷ್ಪ ಪ್ರದರ್ಶನದಲ್ಲಿ ಅನಾವರಣಗೊಳಿಸಲಾಗಿದ್ದು, ಒಟ್ಟಾರೆ ಈ ಫಲ–ಪುಷ್ಪ ಪ್ರದರ್ಶನವು ತುಂಬಾ ಆಕರ್ಷಣೀಯವಾಗಿದ್ದು, ಜನರನ್ನು ತನ್ನತ್ತ ಕೈಬೀಸಿ ಕರೆಯುವಂತಿದೆ.

ಎಲ್ಲಾ ಸಾರ್ವಜನಿಕರು ಮತ್ತು ರೈತರು ಫಲಪುಷ್ಪ ಪ್ರದರ್ಶನವನ್ನು ಕಣ್ಣುಂಬಿಕೊಳ್ಳಬೇಕೆಂದು ಕೊಪ್ಪಳ ತೋಟಗಾರಿಕೆ ಇಲಾಖೆ ಉಪನಿರ್ದೇಶಕರಾದ ಕೃಳ್ಣ ಉಕ್ಕುಂದ ಅವರು ತಿಳಿಸಿದ್ದಾರೆ. ಜನರನ್ನು ತನ್ನತ್ತ ಕೈಬೀಸಿ ಕರೆಯುವಂತಿದೆ. ಎಲ್ಲಾ ಸಾರ್ವಜನಿಕರು ಮತ್ತು ರೈತರು ಫಲಪುಷ್ಪ ಪ್ರದರ್ಶನವನ್ನು ಕಣ್ಣುಂಬಿಕೊಳ್ಳಬೇಕೆಂದು ಕೊಪ್ಪಳ ತೋಟಗಾರಿಕೆ ಇಲಾಖೆ ಉಪನಿರ್ದೇಶಕರಾದ ಕೃಳ್ಣ ಉಕ್ಕುಂದ ಅವರು ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ
ಜಿಲ್ಲಾ ಆಸ್ಪತ್ರೆ, ಬಳ್ಳಾರಿ DISTRICT HOSPITAL, BALLARI
ಎಸ್‌ಟಿಡಿ–08392, ಜಿಲ್ಲಾ ಶಸ್ತ್ರಚಿಕಿತ್ಸಕರು–274255 ಸ.ಆ.ಅಧಿಕಾರಿ–274254
dsballari-hfws@karnataka.gov.in bellaryds@gmail.com
ಸಂ.ಜಿಆಬ/ಟೆಂಡ್/03/2023–24/ಕಾಲ್–2 ದಿನಾಂಕ: 07.03.2024
ಮರು–ಟೆಂಡರ್ ಅಧಿಸೂಚನೆ
ಜಿಲ್ಲಾ ಆಸ್ಪತ್ರೆ, ಬಳ್ಳಾರಿಗೆ 20 ವಿವಿಧ ಹುದ್ದೆಗಳ ಗ್ರೂಪ್ ಸಿ & ಡಿ ಮಾನವ ಸಂಪನ್ಮೂಲವನ್ನು ಜಿಲ್ಲಾ ಏಡ್ಸ್ ಪ್ರತಿಬಂಧಕ ಟ್ರಸ್ಟ್ ನಿಧಿಯಡಿಯಲ್ಲಿ ಹೊರಗುತ್ತಿಗೆಯ ಆಧಾರದ ಮೇಲೆ 01 ವರ್ಷದ ಅವಧಿಗೆ ಒಟ್ಟು ಅಂದಾಜು ಮೊತ್ತ ರೂ.58.73 ಲಕ್ಷಗಳಲ್ಲಿ ಒದಗಿಸಲು ಕೆ.ಟಿ.ಪಿ.ಪಿ ಅಧಿನಿಯಮ 1999 ಮತ್ತು ನಿಯಮಗಳು 2000 ರಂತೆ ದ್ವಿ-ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಇ-ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್: http://www.kppp.karnataka.gov.in ಮೂಲಕ ಅರ್ಹ ಬಿಡ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಮರು ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ:15.03.2024ರ ಸಂಜೆ5.00 ಗಂಟೆ ಇರುತ್ತದೆ. ಆಸಕ್ತಿಯುಳ್ಳ ಬಿಡ್‌ದಾರರು ಟೆಂಡರ್ ಸಲ್ಲಿಸಲು ಹಾಗು ಹೆಚ್ಚಿನ ವಿವರಗಳಿಗಾಗಿ ಮೇಲಿನ ವೆಬ್‌ಸೈಟ್‌ನಲ್ಲಿ ಪಡೆಯಲು ಕೋರಿದೆ.
ಸಹಿ/- ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/982/ಕೆಎಸ್‌ಎಂಸಿಎ/2023–24

# ಆನೆಗೊಂದಿ ಉತ್ಸವ: ಇಂದು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು

ಕೊಪ್ಪಳ, ಮಾರ್ಚ್ 11: ಆನೆಗೊಂದಿ ಉತ್ಸವ–2024ರ ಅಂಗವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪ್ರವಾಸೋದ್ಯಮ ಇಲಾಖೆ, ಬೆಂಗಳೂರು ಹಾಗೂ ಕೊಪ್ಪಳ ಜಿಲ್ಲಾಡಳಿತದ ಸಹಯೋಗದಲ್ಲಿ ಮಾರ್ಚ್ 12 ರಂದು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆನೆಗೊಂದಿಯ ಎರಡು ಪ್ರಮುಖ ವೇದಿಕೆಗಳಲ್ಲಿ ಹಮ್ಮಿಕೊಳ್ಳಲಾಗಿದೆ.

ಮಾರ್ಚ್ 12 ರಂದು ಶ್ರೀ ರಂಗದೇವರಾಯಲು ವೇದಿಕೆಯಲ್ಲಿ ನಡೆಯುವ ಕಾರ್ಯಕ್ರಮಗಳು

ಮಾರ್ಚ್ 12 ರಂದು ಮಧ್ಯಾಹ್ನ 3.30 ರಿಂದ 3.40 ರವರೆಗೆ ಕಾವ್ಯಾ ಅವರಿಂದ ಭರತನಾಟ್ಯ, 3.40 ರಿಂದ 3.50 ರವರೆಗೆ ಮಲ್ಲಿಕಾರ್ಜುನ ಸ್ವಾಮಿ ಅವರಿಂದ ಗಾಯನ, 3.50 ರಿಂದ 4 ರವರೆಗೆ ವೀರಭದ್ರಯ್ಯಸ್ವಾಮಿ ಅವರಿಂದ ಹಿಂದೂಸ್ತಾನಿ ಗಾಯನ, 4 ರಿಂದ 4.10 ರವರೆಗೆ ಶಿವಕುಮಾರ ಗೆಜ್ಜಿ ಅವರಿಂದ ಬಾನ್ಸೂರಿ ವಾದನ, 4.10 ರಿಂದ 4.20 ರವರೆಗೆ ಜಲೀಲ್ ಪಾಷಾ ಮುದ್ದಾಬಳ್ಳಿ ಅವರಿಂದ ತಬಲಾ ಸೋಲೊ, 4.20 ರಿಂದ 4.30 ರವರೆಗೆ ಆವಂತಿಕಾ–ಸೃಷ್ಟಿ ಅವರಿಂದ ಜೋಡಿ ನೃತ್ಯ, 4.30 ರಿಂದ 4.40ರವರೆಗೆ ಶ್ರೀ ಗವಿಸಿದ್ದೇಶ್ವರ ಸಂಗೀತ ಪಾಠಶಾಲೆ ಅವರಿಂದ ಸುಗಮ ಸಂಗೀತ, 4.40 ರಿಂದ 4.50ರವರೆಗೆ ಮಾನಸ ಅವರಿಂದ ಭರತನಾಟ್ಯ, 4.50 ರಿಂದ 5ರವರೆಗೆ ಸಹನಾ ಅವರಿಂದ ಭರತನಾಟ್ಯ, 5 ರಿಂದ 5.10 ರವರೆಗೆ ಲಚ್ಚಣ್ಣ ಹಳೇಪೇಟೆ ಅವರಿಂದ ಶಾಸ್ತ್ರೀಯ ಸಂಗೀತ, 5.10 ರಿಂದ 5.20ರವರೆಗೆ ರೇಷ್ಮಾ ಬೇಗಂ ಅವರಿಂದ ಯೋಗ ನೃತ್ಯ, 5.20 ರಿಂದ 5.30ರವರೆಗೆ ಕೆ ಅಹನಾ ಅವರಿಂದ ಸೋಲೋ ವೆಸ್ಟರ್ನ್ ಮಿಕ್ಸ್, 5.30 ರಿಂದ 5.40ರವರೆಗೆ ನಾಗರಾಜ ಡಿ ಅವರಿಂದ ಸಮೂಹ ನೃತ್ಯ, 5.40 ರಿಂದ 5.50ರವರೆಗೆ ಭೀಮವ್ವ ಶಿಳ್ಳಿಕ್ಯಾತರ ಅವರಿಂದ ತೊಗಲುಗೊಂಬೆ, 5.50 ರಿಂದ 6 ರವರೆಗೆ ವೀರೇಶ್ವರ ಪುಣ್ಯಾಶ್ರಮ ಗದಗ ಅವರಿಂದ ಕಥಾ ಕೀರ್ತನಾ, 6 ರಿಂದ 6.10 ರವರೆಗೆ ಚಂದ್ರಕಲಾ ಭೂಮಿ ತಂಡದಿಂದ ನೃತ್ಯ ರೂಪಕ, 6.10 ರಿಂದ 6.15 ರವರೆಗೆ ಹೇಮಂತಕುಮಾರ ಹಾಗೂ ತಂಡದಿಂದ ಯುಗಳ ಗೀತೆ, 6.15 ರಿಂದ 6.20 ರವರೆಗೆ ಗಂಗಮ್ಮ ಅವರಿಂದ ಸುಗಮ ಸಂಗೀತ, 6.20 ರಿಂದ 6.25 ರವರೆಗೆ ಹೇಮಾ ವಿನಾಯಕ ಪಾಟೀಲ್ ಅವರಿಂದ ದಾರದಲ್ಲಿ ಚಿತ್ರ ಬಿಡಿಸುವುದು, 6.25 ರಿಂದ 6.30 ರವರೆಗೆ ಪಂಚಾಕ್ಷರ ಕುಮಾರ ಅವರಿಂದ ಗಾಯನ ಹಾಗೂ ನಾಡಗೀತೆ.

ಸಂಜೆ ಕಾರ್ಯಕ್ರಮಗಳು:

ಸಂಜೆ 6.30 ರಿಂದ 8 ರವರೆಗೆ ಆನೆಗೊಂದಿ ಉತ್ಸವದ ಸಮಾರೋಪ ಸಮಾರಂಭ ನಡೆಯಲಿದೆ. ಚಲನಚಿತ್ರನಟ ಶ್ರೀಮುರಳಿ ಉಪಸ್ಥಿತರಿರುವರು. ದಿವ್ಯಾ ಆಲೂರ ಅವರು ಕಾರ್ಯಕ್ರಮ ನಿರೂಪಿಸುವರು.

ರಾತ್ರಿ 8ರಿಂದ 8.20ರವರೆಗೆ ರಾಜ್ ಇವೆಂಟ್ ಅವರಿಂದ ಲೇಜರ್ ಶೋ, 8.20 ರಿಂದ 10 ರವರೆಗೆ ಅರ್ಜುನ್ ಜನ್ಯ, ಸತ್ಯವತಿ ರಾಥೋಡ್(ಮಂಗ್ಲಿ ಹಾಗೂ ತಂಡ) ಅವರಿಂದ ಗಾಯನ ಸಂಜೆ, 10 ರಿಂದ 10.30 ರವರೆಗೆ ಆಲ್ ಓಕೆ ತಂಡದಿಂದ ಗಾಯನ ಆಲ್ ಓಕೆ, 10.30 ರಿಂದ 11.30 ರವರೆಗೆ ಮಸ್ಕರಿ ತಂಡ ಮಂಗಳೂರ ಅವರಿಂದ ಕಾಮಿಡಿ ಪ್ರದರ್ಶನ ಕಾರ್ಯಕ್ರಮಗಳು ನಡೆಯಲಿವೆ.

ಶಬರಿ ವೇದಿಕೆಯಲ್ಲಿನ ಸಾಂಸ್ಕೃತಿಕ ಕಾರ್ಯಕ್ರಮಗಳು

ಮಾರ್ಚ್ 12 ರಂದು ಬೆಳಿಗ್ಗೆ 11 ರಿಂದ 2 ರವರೆಗೆ ಗಗನ್ ಮಹಲ್ ಹತ್ತಿರದ ಶಬರಿ ವೇದಿಕೆಯಲ್ಲಿ ಕವಿಗೋಷ್ಠಿ ಕಾರ್ಯಕ್ರಮಗಳು ನಡೆಯಲಿವೆ. ಈ ಕಾರ್ಯಕ್ರಮವನ್ನು ಕೊಪ್ಪಳ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಅಧ್ಯಕ್ಷರಾದ ಶರಣೇಗೌಡ ಪೊಲೀಸ್ ಪಾಟೀಲ್ ಹಾಗೂ ಗಂಗಾವತಿ ತಾಲ್ಲೂಕಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀನಿವಾಸ ಅಂಗಡಿ ಅವರು ಉದ್ಘಾಟಿಸುವರು.

ಸಾಹಿತಿಗಳಾದ ಲಿಂಗಾರೆಡ್ಡಿ ಆಲೂರು ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಸಾಹಿತಿಗಳಾದ ಡಾ.ದೇವೇಂದ್ರಪ್ಪ ಜಾಜಿ ಅವರು ಆಶಯ ನುಡಿ ನುಡಿಯುವರು.

ಮುಖ್ಯ ಅತಿಥಿಗಳಾಗಿ ಸಾಹಿತಿಗಳಾದ ರವೀಂದ್ರಸಾ ಬಾಕಳೆ, ಹನುಮೇಶ ಗುಮಗೇರಿ, ಡಾ.ಲಿಂಗಣ್ಣ ಜಂಗಮರಹಳ್ಳಿ, ರಾಘವೇಂದ್ರ ದಂಡಿನ್, ರಮೇಶ್ ಗಬ್ಬೂರ, ಜಿಲ್ಲಾ ಕಸಾಪ ಕಾರ್ಯದರ್ಶಿ ಚನ್ನಬಸಪಪ್ ಕಡ್ಡಿಪುಡಿ, ಕನಕಗಿರಿ ಕಸಾಪ ಅಧ್ಯಕ್ಷರಾದ ಮಹಬೂಬ್, ಕೊಪ್ಪಳ ಜಿಲ್ಲಾ ಕಸಾಪ ಕಾರ್ಯದರ್ಶಿ ಶೇಖರಗೌಡ ಪೊಲೀಸ್ ಪಾಟೀಲ್, ಕಾರಟಗಿ ತಾಲ್ಲೂಕು ಕಸಾಪ ಅಧ್ಯಕ್ಷರಾದ ಶರಣಪ್ಪ ಕೋಟ್ಯಾಳ್ ಹಾಗೂ ಗಂಗಾವತಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಕಾರ್ಯದರ್ಶಿ ಎಂ ಉಮೇಶ್ ಆಗಮಿಸುವರು. ಜಿಲ್ಲೆಯ ಪ್ರಮುಖ ಹಾಗೂ ಯುವ ಕವಿಗಳು ಕವಿಗೋಷ್ಠಿಯಲ್ಲಿ ಭಾಗವಹಿಸುವರು.

ಮಧ್ಯಾಹ್ನ 3 ರಿಂದ 3.05 ರವರೆಗೆ ಪರಮಾನಂದಸ್ವಾಮಿ ಅವರಿಂದ ಗುಂಪು ನೃತ್ಯ, 3.05 ರಿಂದ 3.10ರವರೆಗೆ ಕಾವ್ಯಾ ಬಾಯಿ ಅವರಿಂದ ಸುಗಮ ಸಂಗೀತ, 3.10 ರಿಂದ 3.20ರವರೆಗೆ ಡಾ. ಆನಂದ ಬಿ.ಹೆಚ್ ಜೋಗಿ ಅವರಿಂದ ಕಿನ್ನೂರಿ ಜೋಗಿ ಪದ, 3.20 ರಿಂದ 3.30 ರವರೆಗೆ ವಿಜಯಲಕ್ಷ್ಮಿ ?ಮೇ ಅವರಿಂದ ತತ್ವಪದ, 3.30 ರಿಂದ 3.40 ರವರೆಗೆ ರೇಣೂಕಮ್ಮ ಅವರಿಂದ ಸುಗಮ ಸಂಗೀತ, 3.40 ರಿಂದ 3.50 ರವರೆಗೆ ಯುವರಾಜ ಅವರಿಂದ ಸುಗಮ ಸಂಗೀತ, 3.50 ರಿಂದ 4 ರವರೆಗೆ ವೆಂಕಟೇಶ ಅವರಿಂದ ಜನಪದ ಗೀತೆ, 4.ರಿಂದ 4.10 ರವರೆಗೆ ತಿಪ್ಪಣ್ಣ ದಾಸರ ಅವರಿಂದ ವಚನ ಸಂಗೀತ, 4.10ರಿಂದ 4.20 ರವರೆಗೆ ಸಿದ್ದೇಶ್ವರ ಶಾಸ್ತ್ರಿಗಳಿಂದ ಕಥಾ ಕೀರ್ತನ, 4.20 ರಿಂದ 4.30 ರವರೆಗೆ ಪರಸಪ್ಪ ಲಮಾಣಿ ಅವರಿಂದ ಜನಪದ ಗೀತೆ, 4.30 ರಿಂದ 4.40 ರವರೆಗೆ ವಾಣಿಶ್ರೀ ಹನುಮಸಾಗರ ಅವರಿಂದ ಸುಗಮ ಸಂಗೀತ, 4.40 ರಿಂದ 4.50 ರವರೆಗೆ ಜಡೇಶ ಎಮ್ಮಿಗನೂರ ಅವರಿಂದ ಜನಪದ ಗೀತೆ, 4.50 ರಿಂದ 5 ರವರೆಗೆ ವೈಷ್ಣವಿ ಭೀಮರಾವ್ ಬಳ್ಳಾರಿ ಅವರಿಂದ ಸಮೂಹ ನೃತ್ಯ, 5 ರಿಂದ 5.10 ರವರೆಗೆ ಪೂಜಾರಿ ದುರ್ಗೇಶ ಅವರಿಂದ ವಚನ ಸಂಗೀತ, 5.10 ರಿಂದ 5.20 ರವರೆಗೆ ಹನುಮಂತಪ್ಪ ಅವರಿಂದ ಶಾಸ್ತ್ರೀಯ ಸಂಗೀತ, 5.20 ರಿಂದ 5.30 ರವರೆಗೆ ಗೀತಾ ಅವರಿಂದ ಸಮೂಹ ನೃತ್ಯ, 5.30 ರಿಂದ 5.40 ರವರೆಗೆ ಜಯರಾಮ್ ಭಟ್ಟರ್ ಅವರಿಂದ ಸುಗಮ ಸಂಗೀತ, 5.40 ರಿಂದ 5.50 ರವರೆಗೆ ನಾರಾಯಣಪ್ಪ ಮಾಡಶಿರವಾರ ಅವರಿಂದ ಜನಪದ ಸಂಗೀತ, 5.50 ರಿಂದ 6 ರವರೆಗೆ ಅಂಜಲಿ ಅವರಿಂದ ಭರತನಾಟ್ಯ, 6 ರಿಂದ 6.10 ರವರೆಗೆ ಬಸವರಾಜ ಅವರಿಂದ ಸುಗಮ ಸಂಗೀತ, 6.10 ರಿಂದ 6.20 ರವರೆಗೆ ಚೈತ್ರಾ ವಿ ಪತ್ತಾರ ಅವರಿಂದ ವಚನ ಸಂಗೀತ, 6.20 ರಿಂದ 6.30 ರವರೆಗೆ ಗೌತಮಿ ಅವರಿಂದ ಘಮಾರ್ ನೃತ್ಯ, 6.30 ರಿಂದ 6.40 ರವರೆಗೆ ಚಿದಾನಂದಮೂರ್ತಿ ಅವರಿಂದ ಸುಗಮ ಸಂಗೀತ, 6.40 ರಿಂದ 6.50 ರವರೆಗೆ ಪೂಜಾ ಬೇವೂರ ಅವರಿಂದ ಜನಪದ ಸಂಗೀತ, 6.50 ರಿಂದ 7 ರವರೆಗೆ ಗಂಗೋತ್ರಿ ಅವರಿಂದ ಭರತನಾಟ್ಯ , 7 ರಿಂದ 7.10 ರವರೆಗೆ ಗ್ಯಾನಪ್ಪ ತಳವಾರ ಅವರಿಂದ ವಚನ ಸಂಗೀತ, 7.10 ರಿಂದ 7.20 ರವರೆಗೆ ಮಹಾಂತಯ್ಯ ಶಾಸ್ತ್ರಿ ಅವರಿಂದ ದಾಸವಾಣಿ, 7.20 ರಿಂದ 7.30 ರವರೆಗೆ ಅಗಸ್ತ?ಯ ಅರಕೇರಿ ಅವರಿಂದ ಜಿಮ್ನಾಸ್ಟಿಕ್ ಪ್ರದರ್ಶನ, 7.30 ರಿಂದ 7.40 ರವರೆಗೆ ಪಲ್ಲವಿ ಆರ್ ಭಟ್ ಅವರಿಂದ ಸುಗಮ ಸಂಗೀತ, 7.40 ರಿಂದ 7.50 ರವರೆಗೆ ಚಂದ್ರಶೇಖರ ಅವರಿಂದ ಜನಪದ ಸಂಗೀತ, 7.50 ರಿಂದ 8 ರವರೆಗೆ ಸುಭಾಷ್ ಪಂಪಣ್ಣ ಅವರಿಂದ ಸುಗಮ ಸಂಗೀತ,

8 ರಿಂದ 8.10 ರವರೆಗೆ ಜುಮ್ಮನಗೌಡ ಅವರಿಂದ ತತ್ವಪದ, 8.10 ರಿಂದ 8.20 ರವರೆಗೆ ಬಿ. ಪೂರ್ಣಶ್ರೀ ವೆಂಕಟಾಪುರ ಅವರಿಂದ ಭರತನಾಟ್ಯ, 8.20 ರಿಂದ 8.30 ರವರೆಗೆ ಡಾ.ಜಮೀವುಲ್ಲಾ ಅವರಿಂದ ಸಾಹಸ ಪ್ರದರ್ಶನ, 8.30 ರಿಂದ 8.40 ರವರೆಗೆ ದೀಕ್ಷಾ ಕಲಾ ನಾಟ್ಯ ಸಂಸ್ಥೆ ಅವರಿಂದ ಭರತನಾಟ್ಯ, 8.40 ರಿಂದ 8.50 ರವರೆಗೆ ವಿಜಯಲಕ್ಷ್ಮಿ ?ಮೇ ಹಂಚಿನಾಳ ಅವರಿಂದ ವಚನ ಸಂಗೀತ, 8.50 ರಿಂದ 9 ರವರೆಗೆ ಒರತಾಪ್ ಹಿರೇಮಠ ಅವರಿಂದ ಸುಗಮ ಸಂಗೀತ, 9 ರಿಂದ 9.10 ರವರೆಗೆ ಎಸ್ ಶ್ಯಾವಳಿಗೆಪ್ಪ ಅವರಿಂದ ಸುಗಮ ಸಂಗೀತ, 9.10 ರಿಂದ 9.20 ರವರೆಗೆ ಚೆನ್ನಪ್ಪ ಬಾವಿಮನಿ ಅವರಿಂದ ಜನಪದ ಸಂಗೀತ, 9.20 ರಿಂದ 9.30 ರವರೆಗೆ ವೀರಪ್ಪ ಮುಂಡರಗಿ ಅವರಿಂದ ರಂಗಗೀತೆ, 9.30 ರಿಂದ 9.40 ರವರೆಗೆ ಶರಣಪ್ಪ ಬನ್ನಿಗೋಳ ಅವರಿಂದ ಬಯಲಾಟದ ಪದಗಳು, 9.40 ರಿಂದ 9.50 ರವರೆಗೆ ಮರಿಸ್ವಾಮಿ ಜಿ ಅವರಿಂದ ಶಾಸ್ತ್ರೀಯ ಸಂಗೀತ,

9.50 ರಿಂದ 10 ರವರೆಗೆ ಮಹಮ್ಮದ್ ರಫಿ ನದಾಫ್ ಅವರಿಂದ ಸುಗಮ ಸಂಗೀತ, 10 ರಿಂದ 10.10 ರವರೆಗೆ ಚಂಪಕಮಾಲಾ ಅವರಿಂದ ಸುಗಮ ಸಂಗೀತ, 10.10 ರಿಂದ 10.20 ರವರೆಗೆ ಬಿ ರೇಖಾ ಅವರಿಂದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ, 10.20 ರಿಂದ 10.30 ರವರೆಗೆ ಗಂಗಾಶ್ರೀ ಕೆ ಅವರಿಂದ ಸುಗಮ ಸಂಗೀತ, 10.30 ರಿಂದ 10.40 ರವರೆಗೆ ಅಬಿದಾಬೇಗಂ ಅವರಿಂದ ಸುಗಮ ಸಂಗೀತ, 10.40 ರಿಂದ 10.50 ರವರೆಗೆ ಸಂಗೀತಾ ಅವರಿಂದ ಸುಗಮ ಸಂಗೀತ, 10.50 ರಿಂದ 11ರವರೆಗೆ ಹೊಂಗಿರಣ ಸಾಂಸ್ಕೃತಿಕ ಸಂಸ್ಥೆ ಹಳಿಯಾಳ ಅವರಿಂದ ಸೂತ್ರದ ಗೊಂಬೆ, 11 ರಿಂದ 11.10ರವರೆಗೆ ಮನೋರಮಾ ಅವರಿಂದ ವಚನ ಸಂಗೀತ, 11.10 ರಿಂದ 11.20 ರವರೆಗೆ ವೈಷ್ಣವಿ ಅವರಿಂದ ಜನಪದ, 11.20 ರಿಂದ 11.30 ರವರೆಗೆ ಎಸ್ ತುಳಸಿ ಅವರಿಂದ ಹಿಂದೂಸ್ತಾನಿ ಸಂಗೀತ, 11.30 ರಿಂದ 11.40 ರವರೆಗೆ ಗೀತಾ ಕಾಶೆಟ್ಟಿ ಅವರಿಂದ ಶಾಸ್ತ್ರೀಯ ಸಂಗೀತ, 11.40 ರಿಂದ 11.45 ರವರೆಗೆ ಸಿ ನಾರಾಯಣಸ್ವಾಮಿ ಅವರಿಂದ ಸುಗಮ ಸಂಗೀತ, 11.45 ರಿಂದ 11.50 ರವರೆಗೆ ಮಂಜುಳಾ ಪೂಜಾರ ಅವರಿಂದ ಸುಗಮ ಸಂಗೀತ, 11.50 ರಿಂದ 12ರವರೆಗೆ ಪೂರ್ಣಿಮಾ ಅವರಿಂದ ಸುಗಮ ಸಂಗೀತ, 12 ರಿಂದ 12.10 ರವರೆಗೆ ಅಕ್ಷತಾ ಅವರಿಂದ ಭರತನಾಟ್ಯ, 12.10 ರಿಂದ 12.20 ರವರೆಗೆ ಅಶ್ವಿನಿ ಅವರಿಂದ ಶಾಸ್ತ್ರೀಯ ಸಂಗೀತ, 12.20 ರಿಂದ 12.30 ರವರೆಗೆ ಕೆ. ರಾಮಪ್ಪ ಅವರಿಂದ ಹಾರ್ಮೋನಿಯಂ, 12.30 ರಿಂದ 12.40 ರವರೆಗೆ ಯಶವಂತ್ ಸ್ಕೂಲ್ ಆಫ್ ಡ್ಯಾನ್ಸ್ ಚಿಕ್ಕಬಳ್ಳಾಪುರ ಅವರಿಂದ ಡ್ಯಾನ್ಸ್, 12.40 ರಿಂದ 12.50 ರವರೆಗೆ ಪಂಪಾಪತಿ ಇಂಗಳಗಿ ಅವರಿಂದ ಭಕ್ತಿಗೀತೆ, 12.50 ರಿಂದ 1 ರವರೆಗೆ ದಾಸನಾಳ ವೆಂಕಟೇಶ ಅವರಿಂದ ಹಿಂದೂಸ್ಥಾನಿ ಸುಗಮ ಸಂಗೀತ, 1 ರಿಂದ 1.10 ರವರೆಗೆ ಗಂಗಾಧರ ಸ್ವಾಮಿ ಅವರಿಂದ ವಚನ ಸಂಗೀತ, 1.10 ರಿಂದ 1.20 ರವರೆಗೆ ಸುಕಮುನಿ ಎಚ್ ಅವರಿಂದ ಜನಪದ, 1.20 ರಿಂದ 1.30 ರವರೆಗೆ ಸಿದ್ದನಗೌಡ ಅವರಿಂದ ತಬಲಾ ಸೋಲೊ, 1.30 ರಿಂದ 1.40 ರವರೆಗೆ ಪ್ರಕಾಶಗೌಡ ಜನಪದ, 1.40 ರಿಂದ 1.50 ರವರೆಗೆ ಕನಕಪ್ಪ ಅವರಿಂದ ವಚನ ಸಂಗೀತ, 1.50 ರಿಂದ 2 ಗಂಟೆಯವರೆಗೆ ಹೆಚ್.ಎಂ ಷಡಕ್ಷರಯ್ಯ ಅವರಿಂದ ಭಾವಗೀತೆ ಗಾಯನ, 2 ರಿಂದ 2.10 ವರೆಗೆ ದೊಡ್ಡಬಸವ ನಾಗಲೀಕರ ಅವರಿಂದ ಸುಗಮ ಸಂಗೀತ, 2.10 ರಿಂದ 2.20 ವರೆಗೆ ವಿನೋದ ಅವರಿಂದ ಸುಗಮ ಸಂಗೀತ, 2.20 ರಿಂದ 2.30 ರವರೆಗೆ ದೇವಾನಂದ ಅವರಿಂದ ಸುಗಮ ಸಂಗೀತ,

2.30 ರಿಂದ 2.40 ರವರೆಗೆ ಹನುಮಂತಪ್ಪ ಉಪ್ಪಾರ ಅವರಿಂದ ದಾಸವಾಣಿ, 2.40 ರಿಂದ 2.50 ರವರೆಗೆ ಜುಜ್ಜುರುಪ ನಾಗೇಶ್ವರ್‌ರಾವ್ ಅವರಿಂದ ಸುಗಮ ಸಂಗೀತ, 2.50 ರಿಂದ 3 ರವರೆಗೆ ಮಧುಕುಮಾರ ಕುಲಕರ್ಣಿ ಅವರಿಂದ ಗಾಯನ(ನಾಡಗೀತೆ), 3 ರಿಂದ 3.10 ರವರೆಗೆ ಮೈಲಾರಪ್ಪ ಬೂದಿಹಾಳ ಅವರಿಂದ ಜನಪದ ಸಂಗೀತ, 3.10 ರಿಂದ 3.20 ರವರೆಗೆ ಆರಾಧನಾ ನೃತ್ಯ ಕಲಾ ಟ್ರಸ್ಟ್ ಅವರಿಂದ ಸಮೂಹ ನೃತ್ಯ, 3.20 ರಿಂದ 3.30 ರವರೆಗೆ ಹರ್ಷಾ ಉಪ್ಪಾರ ಅವರಿಂದ ಗಾಯನ, 3.30 ರಿಂದ 3.40 ರವರೆಗೆ ಭೂಪತಿ ಅವರಿಂದ ಶಾಸ್ತ್ರೀಯ ಸಂಗೀತ, 3.40 ರಿಂದ 3.50 ರವರೆಗೆ ಉಷಾ ಯು ಕಾರಂತ ಅವರಿಂದ ಸುಗಮ ಸಂಗೀತ, 3.50 ರಿಂದ 4 ರವರೆಗೆ ಜ್ಯೋತಿ ಮಾದಗುಂಡಿ ಅವರಿಂದ ಸುಗಮ ಸಂಗೀತ ಕಾರ್ಯಕ್ರಮಗಳು ನಡೆಯಲಿವೆ ಎಂದು ಜಿಲ್ಲಾಡಳಿತದ ಪ್ರಕಟಣೆ ತಿಳಿಸಿದೆ.